

'ಅವೆನ್ಯೂ ಆಫ್ ಡೆಡ್' ನೋಟ

ಹಳ್ಳಿಗಳನ್ನು ಒಳಗೊಂಡ ಚದುರಿದ ಪ್ರದೇಶವಾಗಿತ್ತು. ಆನಂತರ ಹಲವು ಬದಲಾವಣೆಗಳಿಗೆ, ಅನ್ವೇಷಣೆಗಳಿಗೆ ತನ್ನನ್ನು ತಾನು ಒಡ್ಡಿಕೊಳ್ಳುತ್ತಾ ಇಂದು ಬಹುದೊಡ್ಡ ನಗರವಾಗಿ, ಸಾಂಸ್ಕೃತಿಕ ಪ್ರಭಾವವನ್ನೊಳಗೊಂಡ ಆಡಳಿತ ಕೇಂದ್ರವಾಗಿ ಹೆಸರು ಪಡೆದುಕೊಂಡಿದೆ.

ನಾಗರಿಕತೆಯ ಉತ್ತುಂಗದಲ್ಲಿ ಹಂತಹಂತವಾಗಿ ಬೆಳೆದ ಟಿಯೋಟಿಹುಕಾನ್ ಸುಮಾರು 8 ಚದರ ಮೈಲಿಗಳ ನಗರ ಕೇಂದ್ರವನ್ನು ಆವರಿಸಿಕೊಂಡಿದೆ. ಪ್ಲಾಸ್ಟೆಡ್ ಗೋಡೆಗಳ ಮೇಲೆ ಚಿತ್ರಿಸಿದ ವರ್ಣರಂಜಿತ ಭಿತ್ತಿಚಿತ್ರಗಳು ಟಿಯೋಟಿಹುಕಾನ್‌ನ ಪ್ರಮುಖ ಆಕರ್ಷಣೆ. ನಗರದ ಅನೇಕ ಅಪಾರ್ಟ್‌ಮೆಂಟ್‌ಗಳ ಗೋಡೆಗಳು, ಅರಮನೆಗಳು ಮತ್ತು ದೇವಾಲಯಗಳು ಸೇರಿದಂತೆ ಇತರ ಕಟ್ಟಡಗಳ ಮೇಲೆ ಇದೇ ರೀತಿಯ ಭಿತ್ತಿಚಿತ್ರಗಳು ರಾರಾಜಿಸುತ್ತವೆ.

ಕೊಲಂಬಿಯನ್ ಪೂರ್ವದ ನಾಗರಿಕತೆಯಲ್ಲಿ ಬಹು ಹಂತಗಳಲ್ಲಿ ರೂಪುಗೊಂಡ ಕಟ್ಟಡಗಳು, ಅವುಗಳ ಶೈಲಿಗಳು, ವಸತಿ ಕಟ್ಟಡಗಳು, ಉತ್ತರ–ದಕ್ಷಿಣ ಅಕ್ಷದ ಮೇಲಿನ 'ಅವೆನ್ಯೂ ಆಫ್ ದಿ ಡೆಡ್'ನ ಇತಿಹಾ ಹಾಗೂ ಪಿರಮಿಡ್‌ಗಳ ಮೇಲಿನ ಸಂರಕ್ಷಿತ ಭಿತ್ತಿಚಿತ್ರಗಳಿಂದ ಈ ನೆಲ ಐತಿಹಾಸಿಕ ಕುರುಹಾಗಿ ಉಳಿದುಕೊಂಡಿದೆ.



ಪಿರಮಿಡ್ ಮೇಲಿನ ರಚನೆಗಳು

## ಸತ್ತವರ ಹಾದಿಯಲ್ಲಿ...

'ಅವೆನ್ಯೂ ಆಫ್ ದಿ ಡೆಡ್' ಎಂದು ಕರೆಯಲಾಗುವ ರಸ್ತೆಯು ಎರಡು ಮೈಲಿಗಿಂತ ಹೆಚ್ಚು ದೂರ ಸಾಗುವ ಮಾರ್ಗ. ಈ ರಸ್ತೆ ಒಂದು ಕಾಲದಲ್ಲಿ ದೇವಾಲಯಗಳು ಮತ್ತು ಜನರಿಂದ ತುಂಬಿದ ವಾಸಸ್ಥಳವಾಗಿತ್ತು. ಇಲ್ಲಿಯೇ ಪಿರಮಿಡ್‌ಗಳನ್ನು ನಿರ್ಮಿಸಲಾಗಿದ್ದು, ಅವುಗಳ ಮೇಲೆ ಪ್ರಾಣಿಗಳು ಮತ್ತು ಪೌರಾಣಿಕ ಜೀವಿಗಳ ಚಿತ್ರಗಳನ್ನು ಚಿತ್ರಿಸಲಾಗಿದೆ. ಕಲ್ಪನೆ ಕೆರಳಿಸುವ ಈ ರಚನೆಗಳ ತುಣುಕುಗಳು ಇಂದಿಗೂ ಉಳಿದುಕೊಂಡಿವೆ.

ಇಲ್ಲಿ ಧಾರ್ಮಿಕ ಆಚರಣೆಗಳು ನಡೆಯುತ್ತಿದ್ದುದನ್ನು